


# ಹಿಮನದಿಗಳ ಮನುಷ್ಯ

■ ಪ್ರವೀಣ ಕುಲಕರ್ಣಿ

ಶಾಲಾ ದಿನಗಳಲ್ಲಿ, ಗಂಗೆಯನ್ನು ಕರೆತಂದ ಭಗೀರಥನ ಕಥೆ ಕೇಳಿದವರಿಗೆಲ್ಲ ರೋಮಾಂಚನವಾಗಿರಲೇಬೇಕು. ಗಂಗೆ ಬರುವವರೆಗೆ ಪಟ್ಟು ಹಿಡಿದು ಕುಳಿತ ಆತನ ಪ್ರಯತ್ನವು ಎಲ್ಲರಿಗೂ ಆದರ್ಶಪ್ರಾಯ ಎನ್ನುವ ಕಾರಣಕ್ಕಾಗಿಯೇ 'ಭಗೀರಥ ಯತ್ನ' ಎಂಬ ವಿಶೇಷಣ ಹುಟ್ಟಿಕೊಂಡಿದ್ದಂತೆ. ಇಂತಹ ವ್ಯಕ್ತಿಗಳು ನಿಜಕ್ಕೂ ಇರುತ್ತಾರೆಯೇ ಅಥವಾ ಕೇವಲ ಪುರಾಣದ ಸೃಷ್ಟಿಯೇ ಎಂಬ ಪ್ರಶ್ನೆ ನಮ್ಮ–ನಿಮ್ಮನ್ನೆಲ್ಲ ಕಾಡಬಹುದು. ಇದಕ್ಕೆ ಉತ್ತರವಾಗಿ, 'ಯಾಕಪ್ಪ ಇರಲ್ಲ? ನಾನೇ ಇದ್ದೀನಿಲ್ಲ, ನಿಮ್ಮ ಮುಂದೆ ಜೀವಂತ ಸಾಕ್ಷಿಯಾಗಿ' ಎನ್ನುತ್ತಾರೆ, ಲಡಾಖ್‌ನ ಚೆವಾಂಗ್ ನೋರ್ಫೆಲ್. ತಮ್ಮ ಪರಿಸರದಲ್ಲಿ ಒಂದಲ್ಲ, ಎರಡಲ್ಲ, 15 ಕೃತಕ ಹಿಮನದಿಗಳನ್ನು ಸೃಷ್ಟಿಸಿದ 'ಭಗೀರಥ' ಅವರು! ಜಗತ್ತಿಗೆಲ್ಲ ಅವರು 'ಹಿಮ ಮನುಷ್ಯ', 'ಹಿಮನದಿ ಮನುಷ್ಯ' ಎಂದೇ ಪರಿಚಿತರು.

ಲೆಹ್‌ನಲ್ಲಿಯೇ ಹುಟ್ಟಿ, ಬೆಳೆದ ಈ ಸಿವಿಲ್ ಎಂಜಿನಿಯರ್, ತಮ್ಮ ಪರಿಸರದ ರೈತರು ನೀರಿಗೆ ಪರದಾಡುವುದನ್ನು ಕಂಡಿದ್ದರು. ಅವರ ಸಂಕಷ್ಟ ದೂರ ಮಾಡಲು ಏನಾದರೂ ಮಾಡಬೇಕು ಎಂದು ಸದಾ ತುಡಿಯುತ್ತಿದ್ದರು. ಅದೊಂದು ದಿನ ಸಣ್ಣ ಝುರಿಗುಂಟ ಹೋಗುವಾಗ ಅಲ್ಲೊಂದು ಪುಟ್ಟ ವಿದ್ಯಮಾನವನ್ನು ಗಮನಿಸಿದರು. ದಂಡೆಯಲ್ಲಿ ಗಿಡ–ಮರಗಳಿಲ್ಲದ ಜಾಗದಲ್ಲಿ ಝುರಿಯ ನೀರು ವೇಗವಾಗಿ ಹರಿಯುತ್ತಿತ್ತು. ದೂರ ದೂರ ಸಾಗಿ, ಹೆಪ್ಪುಗಟ್ಟುತ್ತಿತ್ತು. ಅದೇ ದಂಡೆಯಲ್ಲಿ ಮರಗಳಿದ್ದ ಪ್ರದೇಶದಲ್ಲಿ ನೀರು ನಿಧಾನವಾಗಿ ಹರಿಯುತ್ತಿತ್ತು ಮತ್ತು ವೇಗವಾಗಿ ಹೆಪ್ಪುಗಟ್ಟುತ್ತಿತ್ತು. ಈ ಚಮತ್ಕಾರವನ್ನು ಕಂಡ ನೋರ್ಫೆಲ್, ಏನೋ ಹೊಳೆದವರಂತೆ ಕಣಿವೆ ಕಡೆ ಮುಖ ಮಾಡಿದರು, ಆರ್ಕಿಮಿಡಿಸ್ ಯುರೇಕಾ, ಯುರೇಕಾ ಎಂದು ಓಡಿಬಂದಂತೆ! ವ್ಯರ್ಥವಾಗಿ ಹರಿಯುತ್ತಿದ್ದ ನದಿ ನೀರನ್ನು ಕಣಿವೆ ಕಡೆಗೆ ತಿರುಗಿಸಿ, ನಿಧಾನವಾಗಿ ಹರಿಯುವಂತೆ ಮಾಡಿದರೆ ನೀರು ಬಲುಬೇಗ ಹೆಪ್ಪುಗಟ್ಟುತ್ತದೆ ಮತ್ತು ವ್ಯರ್ಥವಾಗಿ ಹರಿದುಹೋಗುವುದು ತಪ್ಪುತ್ತದೆ. ಬೇಸಿಗೆಯಲ್ಲಿ ಹಿಮನದಿ ಕರಗಿ, ನೀರಾಗಿ ಹರಿಯುವುದರಿಂದ ರೈತರ ಕೃಷಿಗೆ ಬೇಕಾದಷ್ಟು ನೀರು ಸಿಗುತ್ತದೆ ಎಂಬುದನ್ನು ಅವರು ಪ್ರತಿಪಾದಿಸಿದರು. ಅಷ್ಟಕ್ಕೆ ಅವರು ಸುಮ್ಮನೇ ಕೂರಲಿಲ್ಲ. ಸರ್ಕಾರದಿಂದ ಏನಾದರೂ ಅನುದಾನ ಬರುವುದೇ ಎಂದು ಕಾಯಲೂ ಇಲ್ಲ. ಒಂದೊಂದಾಗಿ ಹಿಮನದಿಯನ್ನು ಅವರು ಸೃಷ್ಟಿಸುತ್ತಲೇ ಹೋದರು.

ನೋರ್ಫೆಲ್ ಅವರ ನೀರ್ಗಲ್ಲ ನದಿ ಒಂದೊಂದಾಗಿ ಹೆಚ್ಚುತ್ತಾ ಹೋದಂತೆ ಲಡಾಖ್‌ನಲ್ಲಿ ಹೊಸದೊಂದು ಚಮತ್ಕಾರ ನಡೆದಿದ್ದೂ ಸ್ಥಳೀಯರ ಗಮನಕ್ಕೆ ಬಂತು. ಈ ಹಿಮನದಿಗಳಿಂದಾಗಿ ಅಲ್ಲಿನ ಅಂತರ್ಜಲಮಟ್ಟ ಕೂಡ ಹೆಚ್ಚಾಗಿತ್ತು. ಮುದುಡಿಹೋಗಿದ್ದ ಕೃಷಿ ಚಟುವಟಿಕೆಗಳು ಅಲ್ಲಿ ಮತ್ತೆ ಗರಿಗೆದರಿದವು. 1996ರಲ್ಲಿ ಶುರುವಾದ ನೋರ್ಫೆಲ್ ಅವರ ಭಗೀರಥ ಯತ್ನದ ಪರಿಣಾಮವಾಗಿ 2012ರ ಹೊತ್ತಿಗೆ ಲಡಾಖ್‌ನಲ್ಲಿ ಹದಿನೈದು ಕೃತಕ ಹಿಮನದಿಗಳು ಸೃಷ್ಟಿಯಾಗಿದ್ದವು. ಫುಕ್ತ್ಸೆ ಎಂಬ ಗ್ರಾಮದಲ್ಲಿ ಅವರು ಸೃಷ್ಟಿಸಿದ ಹಿಮನದಿ ಎಲ್ಲಕ್ಕಿಂತ ದೊಡ್ಡದು. ಸಾವಿರ ಅಡಿ ಉದ್ದ, 150 ಅಡಿ ಅಗಲ ಮತ್ತು ನಾಲ್ಕು ಅಡಿ ಆಳದ ಈ ಹಿಮನದಿಯನ್ನು ಸೃಷ್ಟಿಸಲು ಅವರು ವ್ಯಯಿಸಿದ್ದು ಬರಿ 90 ಸಾವಿರ ರೂಪಾಯಿ! ಅವರ ಸಾಹಸದ ಕಥೆಯನ್ನು ಹೇಳಲು 'ವೈಟ್ ನೈಟ್' ಎಂಬ ಸಾಕ್ಷ್ಯಚಿತ್ರವೂ ನಿರ್ಮಾಣವಾಗಿದೆ.

'ನಾವು ನೀರನ್ನು ಸೃಷ್ಟಿಸಲು ಸಾಧ್ಯವಿಲ್ಲ. ಆದರೆ, ಲಭ್ಯವಿದ್ದ ಜಲ ಸಂಪನ್ಮೂಲವನ್ನು ಜತನವಾಗಿ ಕಾಯ್ದುಕೊಂಡು, ಸದ್ಬಳಕೆ ಮಾಡಿಕೊಳ್ಳಬಹುದು. ಆ ಚಿಂತನೆಯ ಭಾಗವಾಗಿಯೇ ಈ ಹಿಮನದಿಗಳನ್ನು ಸೃಷ್ಟಿಸಿದೆ' ಎನ್ನುತ್ತಾರೆ ನೋರ್ಫೆಲ್. ಪ್ರವಾಸಿಗರ ಪಾಲಿಗೆ ಲಡಾಖ್ ಏನೋ ಸುಂದರ ಸ್ವರ್ಗವಾಗಿ ಕಾಣಬಹುದು. ಆದರೆ, ಅಲ್ಲಿನ ಜನ ಎದುರಿಸುವ ನೀರಿನ ಸಮಸ್ಯೆ ಅವರಿಗೆ ಮಾತ್ರ ಗೊತ್ತು. ಲಡಾಖ್‌ನ ಹತ್ತಾರು ಹಳ್ಳಿಗಳ ಪಾಲಿಗೆ ಈ ಕೃತಕ ಹಿಮನದಿಗಳು ಏಪ್ರಿಲ್–ಜೂನ್ ಅವಧಿಯಲ್ಲಿ ಜೀವಧಾತುಗಳಾಗಿವೆ. ಏಕೆಂದರೆ, ಈ ಅವಧಿಯಲ್ಲಿ ಸಮರ್ಪಕ ಪ್ರಮಾಣದಲ್ಲಿ ನೀರು ಪಡೆಯುವುದು ತುಂಬಾ ಕಠಿಣವಾಗಿತ್ತು ಎಂದು ಇಲ್ಲಿನ ರೈತರು ಹೇಳುತ್ತಾರೆ. ಜಾಗತಿಕ ಹವಾಮಾನ ವೈಪರೀತ್ಯದ ಪರಿಣಾಮಗಳನ್ನು ಎದುರಿಸುವಲ್ಲಿ ಕೃತಕ ಹಿಮನದಿಗಳು ಸ್ಥಳೀಯವಾದ ಒಂದು ಉತ್ತಮ ಪರಿಹಾರ ಎಂದು, ಇಲ್ಲಿನ ಬೆಳವಣಿಗೆಗಳನ್ನು ಅವಲೋಕಿಸಿರುವ ತಜ್ಞರು ಅಭಿಪ್ರಾಯಪಡುತ್ತಾರೆ.

ಸರ್ಕಾರಿ ನೌಕರಿಯಲ್ಲಿದ್ದ ನೋರ್ಫೆಲ್ ಅವಧಿಪೂರ್ವದಲ್ಲೇ ನಿವೃತ್ತಿ ಪಡೆದು, ತಮ್ಮೂರಿಗೆ ಮರಳಿದವರು. ಜನರ ಸೇವೆಗೆ ಟೊಂಕಕಟ್ಟಿ ನಿಂತವರು. ಲಡಾಖ್‌ನ ಪ್ರತಿಯೊಂದು ಹಳ್ಳಿಯಲ್ಲೂ ನೋರ್ಫೆಲ್ ಅವರ ಏನಾದರೊಂದು ಕೊಡುಗೆ ಇದ್ದೇ ಇದೆ. ರಸ್ತೆ ನಿರ್ಮಾಣವೇ ಆಗಿರಬಹುದು, ಸೇತುವೆ ಇರಬಹುದು, ಕಾಲುವೆಗಳು ಇರಬಹುದು, ಚೆಕ್‌ಡ್ಯಾಂಗಳು ಆಗಿರಬಹುದು. ಆದರೆ, ಎಲ್ಲಕ್ಕಿಂತ ಹೆಚ್ಚಾಗಿ ಹಿಮನದಿಗಳ ಸೃಷ್ಟಿ ನನಗೆ ತೃಪ್ತಿ ತಂದಿದೆ ಎಂದು ಅವರು ಹರ್ಷದಿಂದ ಹೇಳುತ್ತಾರೆ. ನೋರ್ಫೆಲ್ ಅವರ ಕೊಡುಗೆಯನ್ನು ಇಲ್ಲಿನ ಪ್ರತಿ ಹಳ್ಳಿಯ ಜನರೂ ನೆನೆಯುತ್ತಾರೆ. ಬಿಬಿಸಿಯಿಂದ ಅವರ ಸಾಧನೆಗಾಥೆಯ ಸಾಕ್ಷ್ಯಚಿತ್ರ ನಿರ್ಮಿಸಲಾಗಿದ. ಹತ್ತಾರು ರಾಷ್ಟ್ರೀಯ, ಅಂತರರಾಷ್ಟ್ರೀಯ ಪ್ರಶಸ್ತಿಗಳು ಅವರನ್ನು ಹುಡುಕಿಕೊಂಡು ಬಂದಿವೆ. ಆದರೆ, ಅವುಗಳಿಂದ ಮೈಮರೆಯದ 80ರ ಹರೆಯದ ಈ ಅಜ್ಜ, 'ನನ್ನ ಜನಕ್ಕಾಗಿ ನಾನು ಇನ್ನೂ ಏನು ಮಾಡಬಹುದು' ಎಂದು ಯೋಚಿಸುತ್ತಲೇ ಇರುತ್ತಾರೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65